ತಿದ್ದುಪಡಿ ಮಾಡಬೇಕೆಂಬ ಪ್ರಸ್ತಾಪ ಇದೆ. ಯಾವಾಗ ಪಂಸೂದೆಯನ್ನು ತಿದ್ದುಪಡಿ ಮೊಡಿ, ಈ ಬಗರ್ ಹುಕುಂ ಸಾಗುವಳಿಯನ್ನು ಸಕ್ರಮ ಮಾಡುತ್ತೀರಿ ? ಮತ್ತೆ ಸರ್ಕಾರದ ಜಮೀನನ್ನು ಸರ್ಕಾರದ ಇಲಾಖೆಗಳಂ ಎಂದರೆ, ಕೆ. ಎಸ್. ಆರ್. ಟಿ ಸಿ., ಪಿ. ಅಂಡ್ ಟಿ ಮತ್ತು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಈ ಡಿಪಾರ್ಟ್‌ಮೆಂಟ್‌ಗಳಿಗೆ ಮಂಜೂರಾತಿ ಮಾಡುವುದು ಬಹಳಷ್ಟು ನಿಧಾನ ವಾಗುತ್ತಿದೆ. ಆದ್ದರಿಂದ ಸರ್ಕಾರ ಈ ಪವರನ್ನು ಜಿಲ್ಲಾಧಿಕಾರಿಗಳಿಗೆ ಕೊಡುವುದಕ್ಕಾಗುತ್ತದೆಯೇ ಎಂದು ತಮ್ಮ ಮೂಲಕ ಪ್ರಶ್ನೆ ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಅವರು ಕೇಳಿದ ಪ್ರಶ್ನೆ ಹೀಗಿದೆ. ಕೋಲಾರ ಜಿಲ್ಲೆಯಲ್ಲಿ ಲಭ್ಯವಿರುವ ದರಖಾಸ್ತು ಜಮೀನಿನ ಒಟ್ಟು ವಿಸ್ತೀರ್ಣವೆಷ್ಟು ಎಂದು ಕೇಳಿದ್ದಾರೆ. ದರಖಾಸ್ತು ಜಮೀನು ಲ್ಯಾಂಡ್ ಗ್ರಾಂಟ್ ರೂಲ್ಸ್‌ನಲ್ಲಿ ೧೪೩ ಎಕರೆ ಮಾತ್ರ ಲಭ್ಯ ಇದೆ ಅನ್ ಅಥರೈಸೆಷನ್ ಕಲ್ಟಿವೇಷನ್ ಬೇರೆ, ಅದಕ್ಕೆ ನಾವು ತಿದ್ದುಪಡಿ ತರುತ್ತಿದ್ದೇವೆ. ಲ್ಯಾಂಡ್ ಗ್ರಾಂಟ್ ರೂಲ್ಸ್ ಸೆಕ್ಷನ್ ೪೫ರ ಪ್ರಕಾರ ರೆಗ್ಯುಲರೈಸ್ ಮಾಡುವುದು ಅದು ಬೇರೆ ರೀತಿಯಲ್ಲಿ ಆದರೆ ಇದು ಲ್ಯಾಂಡ್ ಗ್ರಾಂಟ್ ರೂಲ್ಸ್‌ನಲ್ಲಿ ಕೊಡುವುದು. ಅನ್ ಆಥರೈಸ್ಡ್ ಕಲ್ಟಿವೇಷನ್ ಜಮೀನು ಏನಿದೆ, ಅದಂ ಇದರಲ್ಲಿ ಬರುವುದಿಲ್ಲ. ಈ ಮೂರು ತಾಲ್ಲೂಕುಗಳಲ್ಲಿ ಮಾತ್ರ ಜಮೀನು ಇದೆ ಎನ್ನುವುದನ್ನು ಸ್ಪಷ್ಟಪಡಿಸಿದ್ದೇವೆ. ಚಿಕ್ಕಬಳ್ಳಾಪುರದಲ್ಲಿ ೬ ಎಕರೆ, ಚಿಂತಾಮಣಿಯಲ್ಲಿ ೨೮ ಎಕರೆ, ಬಾಗೇಪಲ್ಲಿಯಲ್ಲಿ ೭೨ ಎಕರೆ, ಗೌಡಿಬಂಡೆಯಲ್ಲಿ ೧೪೩ ಎಕರೆ.

ಶ್ರೀ ಎಂ. ವಿ. ವೆಂಕಟಪ್ಪ —ಸರ್ಕಾರದವರು ಸಿ ಅಂಡ್ ಡಿ ಲ್ಯಾಂಡ್ ಎಂದು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಕೊಟ್ಟಿದ್ದಾರೆ. ಅವರು ಅದನ್ನು ಉಪಯೋಗಿಸಿಕೊಂಡಿಲ್ಲ. ಇಂಥಾದ್ದು ಸಾವಿರಾರು ಎಕರೆ ಇದೆ. ಇದನ್ನು ಉಪಯೋಗಿಸುತ್ತಾ ಇಲ್ಲ. ಈ ರೀತಿ ಉಪಯೋಗಿಸದೇ ಇರುವ ಸಿ ಅಂಡ್ ಡಿ ಫಾರೆಸ್ಟ್ ಲ್ಯಾಂಡನ್ನು ವಾಪಸ್ ತೆಗೆದುಕೊಂಡು, ಈ ಅಂಬೇಡ್ಕರ್ ವರ್ಷದಲ್ಲಿ, ಇದನ್ನು ಹೆಡ್ಕೊಲ್ಡ್ ಕ್ಯಾಸ್ಟ್‌ಗೆ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದೇ ಪ್ರತ್ಯೇಕವಾದ ಪ್ರಶ್ನೆ. ಏಕೆಂದರೆ, ಸಿ ಅಂಡ್ ಡಿ ಲ್ಯಾಂಡ್‌ನ್ನು ಈಗಾಗಲೇ ಕೆಲವು ಕಡೆ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಹ್ಯಾಂಡ್ ಓವರ್ ಮಾಡಿದ್ದೇವೆ. ಆ ಲ್ಯಾಂಡ್ ನೋಟಿಫೈ ಆಗಿದೆ. ಅದು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರ ಡೈರಿಯಲ್ಲಿ ಎಂಟ್ರಿ ಆಗಿದ್ದರೆ ಅಂತಹ ಲ್ಯಾಂಡ್‌ನ್ನು ಪುನ: ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಯಾವುದು ಇನ್ನೂ ಎಂಟ್ರಿ ಆಗಿಲ್ಲ ಅಂತಹ ಜಮೀನು ಇನ್ನೂ ಉಳಿದಿದ್ದರೆ ಬೇಕಾದರೆ ಅದನ್ನು ವಾಪಸ್ ತಗೆದುಕೊಂಡು ಡಿಸ್ಟ್ರಿಬ್ಯೂಟ್ ಮಾಡುವುದಕ್ಕೆ ಪರಿಶೀಲನೆ ಮಾಡುತ್ತೇವೆ.

ಚಿಂತಾಮಣಿಯಲ್ಲಿರುವ ತಾಲ್ಲೂಕು ಕಛೇರಿ

೨೬೫. ಶ್ರೀ ಚೌಡರೆಡ್ಡಿ (ಚಿಂತಾಮಣಿ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ ?

ಅ) ಚಿಂತಾಮಣಿಯಲ್ಲಿ ತಾಲ್ಲೂಕು ಕಛೇರಿಯು ಶಿಥಿಲವಾಗಿ ಹಾಗೂ ಅಪಾಯಕಾರಿ ಸ್ಥಿತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಚಿಂತಾಮಣಿಯಲ್ಲಿ ಮಿನಿ ವಿಧಾನಸೌಧ ನಿರ್ಮಾಣಕ್ಕಾಗಿ ಆಯವ್ಯಯದಲ್ಲಿ ೩.೦೦ ಲಕ್ಷ ರೂ.ಗಳ ಅನುದಾನ ಒದಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗೂ ಈ ಮಿನಿ ವಿಧಾನಸೌಧ ನಿರ್ಮಾಣಕ್ಕಾಗಿ ಆಡಳಿತಾತ್ಮಕ ಮಂಜೂರಾತಿ ನೀಡಲು ೧:೩ ಭಾಗ ಅನುದಾನವನ್ನು ಭರಿಸಲು ಆರ್ಥಿಕ ಇಲಾಖೆಯು ಹೆಚ್ಚುವರಿ ಅನುದಾನ ಒದಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಆಗತ್ಯ ಅಭಿಪ್ರಾಯಕ್ಕಾಗಿ ಕಡತವು ಯೋಜನಾ ಇಲಾಖೆಗೆ ಹೋಗಿರುವುದು ನಿಜವೇ ?

ಈ) ಹಾಗಾದರೆ ಈಗ ವಿಷಯವು ಯಾವ ಹಂತದಲ್ಲಿದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು).—

ಅ) ಇಲ್ಲ.

ಆ) ಚಿಂತಾಮಣಿಯಲ್ಲಿ ಮಿನಿವಿಧಾನಸೌಧ ನಿರ್ಮಾಣಕ್ಕಾಗಿ ೩.೦೦ ಲಕ್ಷ ರೂ.ಗಳ ಅನುದಾನವನ್ನು ಆಯವ್ಯಯದಲ್ಲಿ ಒದಗಿಸಿದೆ. ಆದರೆ ಅಂದಾಜಿನ ೧:೩ ಭಾಗ ಅನುದಾನವು ೧೫.೫ ಲಕ್ಷ

ರೂ. ಗಳಾಗುತ್ತದೆ. ಆರ್ಥಿಕ ಇಲಾಖೆಯು ೧:೩ ಭಾಗ ಅನುದಾನವನ್ನು ಭರಿಸಲು ಹೆಚ್ಚುವರಿ ಅನುದಾನ ನೀಡಿರುವುದಿಲ್ಲ.

ಇ) ಹೌದು. ಯೋಜನಾ ಇಲಾಖೆಯು ಒಪ್ಪಿಗೆ ನೀಡಿರುವುದಿಲ್ಲ.

ಈ) ಈ ಪ್ರಸ್ತಾವನೆಯನ್ನು ಮುಂದಿನ ಆರ್ಥಿಕ ವರ್ಷದಲ್ಲಿ ಪರಿಶೀಲಿಸಲಾಗುವುದು.

ಶ್ರೀ ಚೌಡರೆಡ್ಡಿ.—ಅಧ್ಯಕ್ಷರೇ, ಇದು ದೇವರು ವರಕೊಟ್ಟರೂ ಪೂಜಾರಿ ವರ ಕೊಡಲಿಲ್ಲ ಎನ್ನುವಂತಾಗಿದೆ. ಹಿಂದಿನ ಫೈನಾನ್ಸ್ ಮಿನಿಸ್ಟರ್‌ರವರೂ ಇಲ್ಲೇ ಇದ್ದಾರೆ. ನಮ್ಮ ತಾಲ್ಲೂಕು ಆಫೀಸ್ ಬಹಳ ಡೇಂಜರಸ್ ಕಾಂಡೀಷನ್‌ನಲ್ಲಿದೆ ಎಂದು ಹೇಳಿಬಿಟ್ಟು ಫೈನಾನ್ಸ್ ಸೆಕ್ರೆಟರಿಯವರಿಗೆ ರೆವಿನ್ಯೂ ಸೆಕ್ರೆಟರಿಯವರು ಒಂದು ಲೆಟರ್ ಕಳುಹಿಸಿದ್ದಾರೆ. ಈ ಕಟ್ಟಡ ಬಿದ್ದು ಹೋಗುತ್ತದೆ, ತಹಸೀಲ್ದಾರ್‌ರವರಿಗೆ ಇನ್‌ಷ್ಯೂರೆನ್ಸ್ ಮಾಡಿ ಎಂದು ರೆವಿನ್ಯೂ ಸೆಕ್ರೆಟರಿಯವರು ಬರೆದಿದ್ದಾರೆ.

ಅಧ್ಯಕ್ಷರು.—ಕೇವಲ ತಹಸೀಲ್ದಾರ್‌ರವರಿಗೆ ಇನ್‌ಷ್ಯೂರೆನ್ಸ್ ಮಾಡಿದರೆ ಹೇಗೆ? ಅಲ್ಲಿ ಹೋಗುವ ಜನಗಳಿಗೂ ಮಾಡಬೇಕು.

ಶ್ರೀ ಚೌಡರೆಡ್ಡಿ.—ತಹಸೀಲ್ದಾರ್‌ರವರು ಅಲ್ಲಿ ಹೋಗಿ ಕುಳಿತುಕೊಳ್ಳುತ್ತಾರಲ್ಲ ಅದಕ್ಕೆ ಅವರ ಮೇಲೆ ಬೀಳುತ್ತದೆ. ಇನ್‌ಷ್ಯೂರೆನ್ಸ್ ಮಾಡಿಸಿ ಎಂದು ಹೇಳಿದರು. ಚಿಂತಾಮಣಿಯಲ್ಲಿರುವ ತಾಲ್ಲೂಕು ಕಚೇರಿ ಶಿಥಿಲ ಸ್ಥಿತಿಯಲ್ಲಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ಎಂದರೆ ಇಲ್ಲ ಎಂದು ಹೇಳಿದ್ದಾರೆ ಹಿಂದಿನ ಫೈನಾನ್ಸ್ ಮಿನಿಸ್ಟರ್‌ರವರೇ ಕರೆಸಿ, ಇದು ಬಿದ್ದು ಹೋಗುತ್ತದೆ ಇದಕ್ಕೆ ಸ್ಪೆಷಲ್ ಆಗಿ ಒನ್ ಥರ್ಡ್ ಗ್ರಾಂಟ್ ಕೊಟ್ಟಿದ್ದೇನೆ ಎಂದು ಹೇಳಿದ್ದಾರೆ. ಆದರೆ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನ ಪೂಜಾರಿಗಳು ಇದನ್ನು ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಿದ್ದಾರೆ. ದಯವಿಟ್ಟು ಇದನ್ನು ಕೊಡಿಸಿ ಎಂದು ಕೇಳುತ್ತಿದ್ದೇನೆ. ಆ ಬಿಲ್ಡಿಂಗನ್ನು ನೋಡಿ ಜನಗಳು ಹೇದರುತ್ತಿದ್ದಾರೆ. ಇಲ್ಲದೇ ಹೋದರೆ ಬಿಲ್ಡಿಂಗ್ ಬಿದ್ದು ಹೋಗುತ್ತದೆ, ಜನ ಸತ್ತು ಹೋದರೆ ಆ ಮೇಲೆ ನೀವೇ ಕಾಂಪೆನ್‌ಸೇಷನ್ ಕೊಡಬೇಕಾಗುತ್ತದೆ.

ಅಧ್ಯಕ್ಷರು,—ಎರಡರಲ್ಲಿ ಒಂದನ್ನು ನೀವು ಚೂಸ್ ಮಾಡಿಕೊಳ್ಳಬೇಕು. ಆ ಮೇಲೆ ಕೊಡುತ್ತೀರೋ, ಈಗಲೇ ಕೊಡುತ್ತೀರೋ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮ ತಹಸೀಲ್ದಾರ್‌ರವರು ಸಾಯಬಾರದೆಂಬುದೇ ನಮ್ಮ ಅಪೇಕ್ಷೆ ಆದೂ ಅಲ್ಲದೆ ಹೆಚ್ಚು ತಹಸೀಲ್ ಬಿಲ್ಡಿಂಗ್‌ಗಳು ಆಗಬೇಕು, ವಿಂನಿ ವಿಧಾನಸೌಧಗಳು ಆಗ ಬೇಕೆಂಬುದು ಮುಂಚೆಯೇ ಆಗಿದೆ. ಇದು ನಮ್ಮದೇ ಐಡಿಯಾ ಕೆಲವು ಕಡೆ ಈಗಾಗಲೇ ಕನ್‌ಸ್ಟ್ರಕ್ಷನ್ ಆಗಿದೆ ಇದಕ್ಕೆ ಒನ್ ಥರ್ಡ್ ಬಜೆಟ್ ಪ್ರಾವಿಜನ್ ಮಾಡಿಲ್ಲ. ಇದಕ್ಕೆ ಸಂಮಾರು ೪೬ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಪ್ರಾವಿಜನ್ ಮಾಡಿದ್ದು ೩ ಲಕ್ಷ ರೂಪಾಯಿಗಳು ಅಡಿಷನಲ್ ಒನ್ ಥರ್ಡ್ ಬಜೆಟ್ ಪ್ರಾವಿಜನ್ ಆಗಬೇಕಾದರೆ ಇನ್ನೂ ೧೨ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಇದರ ಬಗ್ಗೆ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿದ್ದೆವು. ಆದರೆ ದುರ್ದೈವದಿಂದ ಅವರು ಆದನ್ನು ಪುನಃ ಹಿಂದಕ್ಕೆ ಹಾಕಿದ್ದಾರೆ. ಪುನ: ಇದನ್ನು ರಿ-ಎಕ್ಸಾಮಿನ್ ಮಾಡಿ ಎಂದು ಹೇಳಿ ಕಳುಹಿಸುತ್ತಿದ್ದೇವೆ.

ಶ್ರೀ ಚೌಡರೆಡ್ಡಿ.—ಈ ತರಹ ಸತ್ಯಕ್ಕೆ ದೂರವಾದ ಉತ್ತರವನ್ನು ಕೊಡಬಾರದು. ನಾನೇ ಕಾಗದ ಬರೆದಿದ್ದೆ. ಏಕ್ಸ್ ಫೈನಾನ್ಸ್ ಮಿನಿಸ್ಟರ್ ಇಲ್ಲೇ ಇದ್ದಾರೆ. ಸ್ಪೆಷಲ್ ಆಗಿ ಇದಕ್ಕೆ ಪ್ರಾವಿಜನ್ ಮಾಡಿದ್ದರೆ. ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಿಂದ ಕ್ಲಿಯರ್ ಆದಮೇಲೆಯೇ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ಗೆ ಹೋಗಿದೆ. ಸದನದಲ್ಲಿ ಈ ತರಹ ಬ್ಲೇಟೆಂಟ್ ಲೈಸ್ ಹೇಳಬಾರದು. ಇದು ತಪ್ಪಾಗುತ್ತದೆ ಸದನದಲ್ಲಿ ಮಿಸ್‌ಲೀಡ್ ಆಗುತ್ತದೆ. ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಿಂದ ಅಪ್ರೂವ್ ಆಗಿ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ಗೆ ಹೋಗಿದೆ. ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರು ವಿಥ್‌ಹೆಲ್ಡ್ ಮಾಡಿದ್ದಾರೆ. ದಯವಿಟ್ಟು ಸ್ವಲ್ಪ ತಿಳಿದುಕೊಳ್ಳಿ. ಏತಕ್ಕೆ ವಿಥ್‌ಹೋಲ್ಡ್ ಮಾಡಿದ್ದಾರೋ ಗೊತ್ತಾಗುತ್ತಿಲ್ಲ. ಈಗ ಫೈನಾನ್ಸ್ ಸೆಕ್ರೆಟರಿಯವರಾಗಿದ್ದ ಗೋಪಾಲರೆಡ್ಡಿಯವರು ಬದಲಾವಣೆ ಆಗಿದ್ದಾರೆ. ಆದರೆ ಫೈನಾನ್ಸ್ ಮಿನಿಸ್ಟರ್‌ರವರು ಇಲ್ಲಿ ಇದ್ದಾರೆ. ಅವರನ್ನೇ ಕೇಳಿ ಅವರು ಕೊಟ್ಟಿದ್ದಾರೆ. ಚಿಂತಾಮಣಿಯಲ್ಲಿ ತಾಲ್ಲೂಕು ಆಫೀಸ್ ಬಹಳ ಹೀನ ಸ್ಥಿತಿಯಲ್ಲಿದೆ, ಬಿದ್ದು ಹೋಗುವ ಸ್ಥಿತಿಯಲ್ಲಿದೆ ಅಲ್ಲಿ ಜನ ಸತ್ತು ಹೋಗುವ ಸ್ಥಿತಿಯಲ್ಲಿದ್ದಾರೆ, ಆದಕ್ಕೋಸ್ಕರ ಸ್ಪೆಷಲ್ ಆಗಿ ಗ್ರಾಂಟ್ ಕೊಡುತ್ತೇನೆಂದು ಹೇಳಿ ಕೊಟ್ಟಿದ್ದಾರೆ. ದಯವಿಟ್ಟು ಪರಿಶೀಲನೆ ಮಾಡಿ. ಪರಿಶೀಲನೆ ಮಾಡಿ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಕ್ಲಿಯರೆನ್ಸ್ ಮಾಡಿದ್ದಾರೆ. ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರು ಕ್ಲಿಯರೆನ್ಸ್ ಕೊಡಲಿ ತಾವು ಹೊಸದಾಗಿ ಬಂದಿದ್ದೀರಿ. ದಯವಿಟ್ಟು ಏನು ನಡೆದಿದೆ ಎಂದು ಹೇಳುತ್ತಿದ್ದೇನೆ. ಆ ಬಿಲ್ಡಿಂಗ್

ಬಹಳ ಡೇಂಜರಸ್ ಸ್ಥಿತಿಯಲ್ಲಿದೆ. ಅದು ೧೫೦ ವರ್ಷಗಳ ಹಿಂದೆ ಕಟ್ಟಿದ್ದು. ಯಾವತ್ತು ಬಿದ್ದು ಹೋಗುತ್ತದೋ ಗೊತ್ತಿಲ್ಲ. ಬಿದ್ದು ಹೋದರೆ ಸರಕಾರದವರೇ ಜವಾಬ್ದಾರಿ. ನಮ್ಮ ಜವಾಬ್ದಾರಿ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸನ್ಮಾನ್ಯ ಅಧ್ಯಕ್ಷರೇ, ಅವರು ಹೇಳಿದ ಹಾಗೆ ನಮ್ಮ ಡಿಪಾರ್ಟ್‌ಮೆಂಟ್‌ನಿಂದ ನಾವು ಕಳುಹಿಸಿದ್ದೇವೆ. ನಾನು ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿ ಇದ್ದೇನೆ ಎಂಬುದನ್ನು ಅವರು ಅರ್ಥ ಮಾಡಿಕೊಂಡರೆ ಒಳ್ಳೆಯದು. ತಮ್ಮ ರಿಕ್ವೆಸ್ಟ್ ಮೇರೆಗೆ ನಮ್ಮ ಡಿಪಾರ್ಟ್‌ಮೆಂಟ್‌ನಿಂದ ಈಗಾಗಲೇ ಕಳುಹಿಸಿದ್ದೇವೆ. ಆದರೆ ಇದು ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್ ಇದನ್ನು ಒಪ್ಪುವುದಿಲ್ಲ ಎಂದು ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರು ರಿಜೆಕ್ಟ್ ಮಾಡಿದ್ದಾರೆ. ಪುನಃ ಇದನ್ನು ಕಳುಹಿಸಿ ಎಂದು ಹೇಳುತ್ತಿದ್ದಾರೆ, ಪುನ: ರಿಎಕ್ಸಾಮಿನ್ ಮಾಡಿ ಎಂದು ಒತ್ತಾಯ ಮಾಡಿ ಅಗತಕ್ಕಂಥ ಪ್ರಯತ್ನವನ್ನು ನನ್ನ ವತಿಯಿಂದ ಮಾಡುತ್ತೇನೆ.

ಶ್ರೀ ಪಿ. ಸಿ. ಸಿದ್ದನಗೌಡರ್.—ಮಾನ್ಯ ಕಂದಾಯ ಸಚಿವರು ಹೇಳಿದ ಹಾಗೆ ಬಜೆಟ್ ಪ್ರಾವಿಜನ್ ಇದ್ದರೆ ಮಾಡಬಹುದು. ಕಲಘಟಗಿಯಲ್ಲಿ ಮಿನಿವಿಧಾನಸೌಧ ಕಟ್ಟುವುದಕ್ಕೆ ಬಜೆಟ್ ಪ್ರಾವಿಜನ್ ಆಗಿದೆ ಆದರೆ ಇದುವರೆಗೆ ಮಿನಿವಿಧಾನಸೌಧ ಮಾಡಿಲ್ಲ. ಬಜೆಟ್ ಪ್ರಾವಿಜನ್ ಇರುವುದರಿಂದ ಅಲ್ಲಿ ಮಾಡ ಬಹುದೇ ಎಂದು ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು.—ಅವರು ಚಿಂತಾಮಣಿ ವಿಚಾರ ಕೇಳುತ್ತಿದ್ದಾರೆ.

ಶ್ರೀ ಬೌಡರೆಡ್ಡಿ.—ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಬಜೆಟ್ ಪ್ರಾವಿಜನ್ ಮಾಡಿದ್ದಾರೆ. ಸ್ಪೆಷಲ್ ಆಗಿ ಇದಕ್ಕೊಸ್ಕರ ಮಾಡಿದ್ದಾರೆ. ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರು ಏತಕ್ಕೆ ಈ ರೀತಿ ಮಾಡುತ್ತಿದ್ದಾರೋ ನನಗೆ ಅರ್ಥವಾಗುವುದಿಲ್ಲ. ಇವರು ಕರೆಕ್ಟ್ ಆಗಿ ಮಾಡಿದ್ದಾರೆ. ಪರಿಸ್ಥಿತಿ ಏನಾಗಿತ್ತು ಎಂದರೆ ಮೊದಲು ಇದಕ್ಕೆ ಒಂದು ಲಕ್ಷ ರೂಪಾಯಿ ಪ್ರಾವಿಜನ್ ಮಾಡಿದರು. ಅಲ್ಲಿ ತಾಲ್ಲೂಕು ಆಫೀಸ್ ಬಿದ್ದು ಹೋಗುವ ಪರಿಸ್ಥಿತಿಯಲ್ಲಿತ್ತು. ಅದಕ್ಕೆ ತಾಲ್ಲೂಕು ಆಫೀಸ್‌ನ್ನು ಮುನಿಸಿಪಲ್ ಆಫೀಸ್‌ನಲ್ಲಾದರೂ ಇಟ್ಟುಕೊಳ್ಳೋಣ ಎಂದು ಆಲೋಚನೆ ಮಾಡುತ್ತಿದ್ದರು. ನಾನು ಮಾಜಿ ಹಣಕಾಸಿನ ಸಚಿವರನ್ನು ಭೇಟಿ ಮಾಡಿ ವಿನಂತಿಸಿಕೊಂಡಾಗ ಅವರು ೩ ಲಕ್ಷ ರೂಪಾಯಿಗಳ ಬಜೆಟ್ ಪ್ರಾವಿಜನ್ ಮಾಡಿ ಕೊಟ್ಟಿದ್ದಾರೆ. ಅವರು ಫೈನಾನ್ಸ್ ಸೆಕ್ರೆಟರಿಯವರನ್ನು ಮತ್ತು ರೆವಿನ್ಯೂ ಸೆಕ್ರೆಟರಿಯವರನ್ನು ಸಹ ಕಳುಹಿಸಿದ್ದಾರೆ. ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಿಂದ ಕ್ಲಿಯರೆನ್ಸ್ ಸಿಕ್ಕಿದ ಮೇಲೆ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರು ರಿಜೆಕ್ಟ್ ಮಾಡುವ ಅವಶ್ಯಕತೆ ಏನಿದೆ ? ಏಕೆ ಈ ತರಹದ ಉತ್ತರ ಬರುತ್ತದೆಯೋ ನನಗೆ ಗೊತ್ತಿಲ್ಲ.

ಶ್ರೀ ಸಿ. ಬೈರೇಗೌಡ.—ಮಾನ್ಯ ಮಂತ್ರಿಗಳು ಮೂರನೇ ಒಂದು ಭಾಗದ ಬಜೆಟ್ ಪ್ರಾವಿಜನ್ ಇಲ್ಲ ಎಂದು ಹೇಳುತ್ತಿದ್ದಾರೆ. ಇದು ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್‌ನಲ್ಲಿ ಬರುತ್ತದೆಂದು ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರು ಅಬ್ಜೆಕ್ಷನ್ ಮಾಡಿದ್ದಾರೆ. ಈಗ ಮೂರನೇ ಒಂದು ಭಾಗದ ಬಜೆಟ್ ಪ್ರಾವಿಜನ್ ಮಾಡಲು ೧೨-೧೩ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಅಲ್ಲಿ ಈಗ ಕೇವಲ ೩ ಲಕ್ಷ ರೂಪಾಯಿಗಳ ಮಾತ್ರ ಇದೆ, ಇನ್ನುಳಿದ ೯ ಲಕ್ಷ ರೂಪಾಯಿಗಳನ್ನು ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಬಜೆಟ್ ಪ್ರಾವಿಜನ್ ಮಾಡಿ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ಗೆ ಕೊಟ್ಟರೆ ಆಗ ಅದು ಅಬ್ಜೆಕ್ಷನ್ ಆಗುವುದಿಲ್ಲ. ಆ ೯ ಲಕ್ಷ ರೂಪಾಯಿಗಳನ್ನು ತಾವು ಅನುದಾನ ರೂಪದಲ್ಲಿ ಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಈಗಾಗಲೇ ಹೇಳಿದ್ದೇನೆ. ಪುನಃ ಆದನ್ನು ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿಕೊಟ್ಟು ಒತ್ತಾಯ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ.—೯ ಲಕ್ಷ ರೂಪಾಯಿಗಳನ್ನು ನಿಮ್ಮ ಇಲಾಖೆ ಕೊಡುತ್ತದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಲ್ಲ ಈಗ ನನ್ನ ಹತ್ತಿರ ಇರತಕ್ಕಂಥ ಮಾಹಿತಿ ಪ್ರಕಾರ ಬಜೆಟ್ ಪ್ರಾವಿಜನ್ ಇರುವುದು ೩ ಲಕ್ಷ ರೂಪಾಯಿಗಳು ನಾನು ಅದನ್ನು ಬೇಕಾದರೆ ಓದುತ್ತೇನೆ

> "A provision of Rs 3 lakhs was made in the budget for the construction of a new Mini-Vidhana Soudha at Chintamani. During the current financial year the revised estimate works out to Rs. 46,50,000 1/3 initial budget provision to be made in the budget works out to Rs. 15.5 lakhs. The finance Department and Planning Department are not agreeable to release the additional

non-plan expenditure, involved in this case. There are similar proposals throughout the State. However, this issue will be re-examined during the next financial year."

ಎನ್ನತಕ್ಕಂಥ ಪಾಯಿಂಟ್ ಇದೆ. ನಾನು ಪುನಃ ಹೇಳುತ್ತೇನೆ. ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಕ್ಲಿಯರ್ ಆಗಿದ್ದರೆ ನಾನಂ ಪ್ಲಾನಿಂಗ್ ಸೆಕ್ರೆಟರಿ ಮತ್ತು ಫೈನಾನ್ಸ್ ಸೆಕ್ರೆಟರಿಯವರನ್ನು ಕರೆಸಿ ಮಾತನಾಡುತ್ತೇನೆ.

SRI M. RAJASHEKARA MURTHY.—For the benefit of the House I must say that I have cleared the file.

MR. SPEAKER.—You can take note of it.

SRI MALLIKARJUNA M. KHARGE.—I have already stated that if it is cleared, I will call the Planning Secretary and the Finance Secretary.

ಶ್ರೀಮತಿ ಮೋಟಮ್ಮ.—ಫೈಲ್ ಎಲ್ಲಿ ಹೋಗಿದೆ. ಅದು ಬೇಕಲ್ಲ ?

ಅಧ್ಯಕ್ಷರು.—ಆ ಫೈಲ್ ಎಲ್ಲಿ ಇರಬೇಕೋ ಅಲ್ಲಿ ಇದೆ.

ಶ್ರೀಮತಿ ಮೋಟಮ್ಮ.—ಆ ಫೈಲ್ ಕ್ಲಿಯರ್ ಆಗಿದೆ ಎಂದು ಮಾಜಿ ಹಣಕಾಸಿನ ಸಚಿವರು ಹೇಳಿದ್ದಾರೆ. ಹಾಲಿ ರೆವಿನ್ಯೂ ಮಂತ್ರಿಗಳು ಆ ಫೈಲ್ ಇಲ್ಲ ಎಂದು ಹೇಳುತ್ತಿದ್ದಾರೆ. ಆ ಫೈಲ್ ಎಲ್ಲಿದೆ ಎನ್ನುವುದು ಬೇಕಲ್ಲ ?

ಅಧ್ಯಕ್ಷರು.—ರೂಟ್ ಮ್ಯಾಪ್‌ನಲ್ಲಿ ಹುಡುಕಿಕೊಂಡು.

Identification of Drought-prone Areas

284. SRI BABAGOUD PATIL (Kittur).— Will the Minister for Revenue be pleased to state

The factors that are considered for declaring a particular area as a drought area.

SRI M. MALLIKARJUNA KHARGE (Minister for Revenue).—

i) Rainfall
ii) Anewari (Average Crop yield)
iii) Availability of drinking water
iv) Availability of fodder
v) Employment to agricultural labourers.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.—ಮಾನ್ಯ ಅಧ್ಯಕ್ಷರೆ, ಬರಗಾಲ ಪೀಡಿತ ಪ್ರದೇಶ ವೆಂದು ಘೋಷಣೆ ಮಾಡಲು ಮಳೆ ಆಧಾರ ಎಂದು ಹೇಳಿದ್ದಾರೆ. ಕೆಲವು ಪ್ರದೇಶಗಳಲ್ಲಿ ಮಳೆ ಆಗದೆ ಬೀಜ ಬಿತ್ತನೆ ಮಾಡಿಲ್ಲ. ರಸಗೊಬ್ಬರ ಹಾಕಿಲ್ಲ. ಇನ್ನು ಕೆಲವು ಪ್ರದೇಶಗಳಲ್ಲಿ ಮಳೆ ಆಗಿದೆ. ಬೇಕಾದಷ್ಟು ಮಳೆ ಆಗಿದ್ದರೂ ಸಹ ಬೆಳೆ ಸರಿಯಾಗಿ ಆಗಿಲ್ಲ. ಕೆಲವು ಪ್ರದೇಶಗಳಲ್ಲಿ ಎರಡು ಮೂರು ತಿಂಗಳು ಮಳೆ ಆಗಿದೆ. ಹತ್ತಿ ಗಿಡಗಳಲ್ಲಿ ಹೂವು ಮತ್ತು ಕಾಯಿಗಳು ಎಲ್ಲಾ ಬಿದ್ದು ಹೋಗಿವೆ. ಆದರೂ ಮಳೆ ಆಧಾರವೇ ಬರಗಾಲ ಪೀಡಿತ ಎಂದು ಘೋಷಣೆ ಮಾಡಲು ಕಾರಣ ಎಂದು ಹೇಗೆ ಹೇಳುತ್ತೀರಿ ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಈಗ ಬರಗಾಲ ಪೀಡಿತ ಪ್ರದೇಶ ಯಾವು ಯಾವುದು ಎಂದು ಘೋಷಣೆ ಮಾಡಬೇಕಾದರೆ ಕೆಲವು ಸಾರಮ್ಸ್ ಇವೆ. ಅದು ನಮಗೂ ಗೊತ್ತಿದೆ. ಬೇಕಾದಾಗ ಮಳೆ ಆಗದಿದ್ದರೆ ಅಂದರೆ ಕಾಲಕ್ಕೆ ಸರಿಯಾಗಿ ಮಳೆ ಆಗದಿದ್ದರೆ, ಒಂದು ವೇಳೆ ಮಳೆ ಯಾದರೂ ತೊಂದರೆ ಆದರೆ ಅಂತಹ ಪ್ರದೇಶವನ್ನು ಕೂಡ ಬರಗಾಲ ಪೀಡಿತ ಪ್ರದೇಶ ಎಂದು ಘೋಷಣೆ ಮಾಡಿ ಪರಿಹಾರ ಕೊಡತಕ್ಕಂಥ ವ್ಯವಸ್ಥೆ ಇದೆ.